# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 139 |
| ಸದಸ್ಯರ ಹೆಸರು | : | ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 15.07.2024 |
| ಉತ್ತರಿಸುವವರು | : | ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿರುವ ಆನೆ ಶಿಬಿರಗಳಲ್ಲಿ ಆನೆಗಳ ಸರಣಿ ಸಾವಿಗೆ ಸಕಾಲದಲ್ಲಿ ಸೂಕ್ತ ಚಿಕಿತ್ಸೆ ದೊರೆಯದಿರುವುದು ಹಾಗೂ ಅವುಗಳ ರೋಗಗಳನ್ನು ಪತ್ತೆ ಹಚ್ಚಲು ವಿಫಲವಾಗಿರುವುದಕ್ಕೆ ಅರಣ್ಯ ಇಲಾಖೆಯಲ್ಲಿ ತಜ್ಞ ವನ್ಯಜೀವಿ ವೈದ್ಯರ ಕೊರತೆ ಇರುವುದೇ ಮೂಲ ಕಾರಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದಲ್ಲಿರುವ ಆನೆ ಶಿಬಿರಗಳು ಅನುಭವವುಳ್ಳ ಪಶುವೈದ್ಯರನ್ನು ಹೊಂದಿರುತ್ತದೆ. ಆನೆ ಶಿಬಿರಗಳಲ್ಲಿರುವ ಆನೆಗಳಿಗೆ ಸೂಕ್ತ ವೈದ್ಯಕೀಯ ತಪಾಸಣೆಯನ್ನು ಆಗಿಂದಾಗ್ಗೆ ಕೈಗೊಳ್ಳಲಾಗುತ್ತಿದೆ. ಕೆಲವೊಂದು ಪ್ರಕರಣಗಳಲ್ಲಿ ಸೂಕ್ತ ಚಿಕಿತ್ಸೆಯನ್ನು ನೀಡಿದ್ದಾಗ್ಯೂ ಆನೆಗಳು ಚಿಕಿತ್ಸೆಗೆ ಸ್ಪಂದಿಸದೆ ಸಾವನ್ನಪ್ಪಿರುತ್ತವೆ. |
| (ಆ) | ಬಂದಿದ್ದಲ್ಲಿ, ಪ್ರಸ್ತುತ ಅರಣ್ಯ ಇಲಾಖೆಯಲ್ಲಿ ಎಷ್ಟು ಪೂರ್ಣ ಪ್ರಮಾಣದ ತಜ್ಞ ವನ್ಯಜೀವಿ ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ; | ಪ್ರಸ್ತುತ ಅರಣ್ಯ ಇಲಾಖೆಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಪಶುವೈದ್ಯಾಧಿಕಾರಿಗಳ ಹುದ್ದೆಯನ್ನು ಸರ್ಕಾರದ ಆದೇಶ ದಿನಾಂಕ:18.02.2012 ಹಾಗೂ 07.06.2014 ರನ್ವಯ ಸೃಜಿಸಿ ಆದೇಶಿಸಲಾಗಿದ್ದು, ಪಶುವೈದ್ಯಾಧಿಕಾರಿಗಳ ಸೇವೆಯನ್ನು ಪಶುಪಾಲನಾ ಹಾಗೂ ಪಶುವೈದ್ಯ ಸೇವಾ ಇಲಾಖೆಯಿಂದ ನಿಯೋಜನೆ ಮೇಲೆ ಪಡೆದುಕೊಳ್ಳಲಾಗುತ್ತಿದೆ.<br><br>ಸದರಿ ಪಶು ವೈದ್ಯಾಧಿಕಾರಿಗಳನ್ನು ಈ ಕೆಳಕಂಡ ವಿಭಾಗಗಳಿಗೆ ನಿಯೋಜನೆ ಮಾಡಿಕೊಳ್ಳಲಾಗಿದೆ:- |

| | | | |
|---|---|---|---|
| 1 | ಸಹಾಯಕ ನಿರ್ದೇಶಕರು ಪಶುವೈದ್ಯಾಧಿಕಾರಿಗಳು | 01 | - |
| 2 | ಬಂಡೀಪುರ ಹುಲಿಸಂರಕ್ಷಿತ | 01 | 01 |
| 3 | ನಾಗರಹೊಳೆ ಹುಲಿಸಂರಕ್ಷಿತ | 01 | 01 |
| 4 | ಭದ್ರಾಹುಲಿ ಸಂರಕ್ಷಿತ | 01 | - |
| 5 | ಬಿ.ಆರ್.ಟಿ ಹುಲಿಸಂರಕ್ಷಿತ | 01 | - |
| 6 | ಅಣಶಿ-ದಾಂಡೇಲಿ ಹುಲಿಸಂರಕ್ಷಿತ | 01 | - |
| 7 | ಮೈಸೂರು ವೃತ್ತ | 01 | 01 |
| 8 | ಶಿವಮೊಗ್ಗ ವೃತ್ತ | 01 | 01 |
| 9 | ಬೆಂಗಳೂರು ವೃತ್ತ | 01 | 01 |
| 10 | ಮಂಗಳೂರು ವೃತ್ತ | 01 | - |
| 11 | ಕೊಡಗು ವೃತ್ತ | 01 | - |
| 12 | ಹಾಸನ ವೃತ್ತ | 01 | - |
| | ಒಟ್ಟು | 12 | 05 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಇ) | ಆನೆ ಹಾಗೂ ವನ್ಯಜೀವಿಗಳ ರಕ್ಷಣೆಗೆ ಅರಣ್ಯ ಇಲಾಖೆಯಲ್ಲಿ ತಜ್ಞ ವನ್ಯಜೀವಿ ವೈದ್ಯರ ವೃಂದವೊಂದನ್ನು ಸೃಷ್ಟಿಸಿ ಪೂರ್ಣ ಪ್ರಮಾಣದ ತಜ್ಞ ವನ್ಯಜೀವಿ ವೈದ್ಯರನ್ನು ನೇಮಕ ಮಾಡಿಕೊಳ್ಳಲು ಇದುವರೆಗೆ ಯಾವುದೇ ಕ್ರಮ ವಹಿಸದಿರಲು ಕಾರಣಗಳೇನು; | ಪ್ರಸ್ತುತ ಅರಣ್ಯ ಇಲಾಖೆಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಪಶುವೈದ್ಯಾಧಿಕಾರಿಗಳ ಸೇವೆಯನ್ನು ಸರ್ಕಾರದ ಆದೇಶ ದಿನಾಂಕ: 18.02.2012 ಹಾಗೂ 07.06.2014ರನ್ವಯ ಪಶುಪಾಲನಾ ಹಾಗೂ ಪಶುವೈದ್ಯ ಸೇವಾ ಇಲಾಖೆಯಿಂದ ನಿಯೋಜನೆ ಮೇಲೆ ಪಡೆದುಕೊಳ್ಳಲಾಗುತ್ತಿದೆ. |
| (ಈ) | ಪಶುವೈದ್ಯಕೀಯ ಇಲಾಖೆಯಿಂದ ತಾತ್ಕಾಲಿಕ ನಿಯೋಜನೆ ಮೇಲೆ ವೈದ್ಯರನ್ನು ನೇಮಿಸಿಕೊಳ್ಳುವುದನ್ನು ಬಿಟ್ಟು, ವಿಶೇಷ ಜ್ಞಾನ, ತಾಳ್ಮೆ ಹಾಗೂ ಪ್ರಾಣಿ ಪ್ರೀತಿ ಅಗತ್ಯವಿರುವ ತಜ್ಞ ವನ್ಯಜೀವಿ ವೈದ್ಯರನ್ನು ಯಾವ ಕಾಲಮಿತಿಯೊಳಗೆ ಅರಣ್ಯ ಇಲಾಖೆ ನೇಮಿಸಿಕೊಳ್ಳಲಿದೆ? | ಸರ್ಕಾರದ ಆದೇಶ ದಿನಾಂಕ:18.02.2012 ಹಾಗೂ 07.06.2014ರನ್ವಯ ಅರಣ್ಯ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ, ಪಶುವೈದ್ಯಾಧಿಕಾರಿಗಳ ಸೇವೆಯನ್ನು ಪಶುಪಾಲನಾ ಹಾಗೂ ಪಶುವೈದ್ಯ ಸೇವಾ ಇಲಾಖೆಯಿಂದ ನಿಯೋಜನೆ ಮೇಲೆ ಪಡೆದುಕೊಳ್ಳಲಾಗುತ್ತಿದೆ.<br><br>ಮುಂದುವರೆದು ಮಂಜೂರಾದ ಹುದ್ದೆಗಳಿಗೆ ಅನುಗುಣವಾಗಿ ಖಾಲಿ ಇರುವ ಪಶುವೈದ್ಯಾಧಿಕಾರಿಗಳ ಸೇವೆಯನ್ನು ತಾತ್ಕಾಲಿಕವಾಗಿ ಹೊರಗುತ್ತಿಗೆ ಆಧಾರದ ಮೇಲೆ ಪಡೆದುಕೊಳ್ಳಲು ಕ್ರಮವಹಿಸಲಾಗಿದೆ. |

**ಸಂಖ್ಯೆ: ಅಪಜೀ 88 ಎಫ್‌ಡಬ್ಲ್ಯೂಎಲ್ 2024**

**(ಈಶ್ವರ ಬಿ.ಖಂಡ್ರೆ)**

ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು